# ಮಾಸ ಭವಿಷ್ಯ

**ಅರುಣ ಪಿ. ಭಟ್**



**ಮೇಷ:** ಮಹತ್ವದ ಆರ್ಥಿಕ ವ್ಯವಹಾರಗಳು ಪೂರ್ಣಗೊಳ್ಳುವವು. ತಿಂಗಳ ಕೊನೆಯಲ್ಲಿ ಮನೆಗೆ ಅಪರೂಪದ ಬಂಧುಗಳ ಆಗಮನದಿಂದ ಮನೆಯಲ್ಲಿ ಸಂತಸ. ತಿಂಗಳ ಉತ್ತರಾರ್ಧದಲ್ಲಿ ಸ್ಥಿರತೆ ಕಂಡುಬರಲಿದೆ. ಉದ್ಯೋಗದಲ್ಲಿ ಸ್ಥಳ ಬದಲಾವಣೆ ಸಾಧ್ಯತೆ, ಕೆಲಸದಲ್ಲಿ ವಿರೋಧ. ಶುಭ: 12, 16, 22 ಅಶುಭ: 14, 18, 28.

**ವೃಷಭ:** ಕಲಾವಿದರಿಗೆ ಉತ್ತಮ ಸಮಯ, ಉತ್ತಮ ಅವಕಾಶ. ಸರಕಾರಿ ಕೆಲಸಗಳಲ್ಲಿ ಯಶಸ್ಸು. ಗೃಹ ನಿರ್ಮಾಣ ಅಥವಾ ನೂತನ ಮನೆ ಕೊಳ್ಳುವ ಯೋಗವಿದೆ. ಬರತಕ್ಕ ಸಾಲದ ಬಾಕಿ ಹಣ ಕೈಸೇರುವುದು. ತಿಂಗಳ ಉತ್ತರಾರ್ಧದಲ್ಲಿ ದುಃಖಗಳು ದೂರಾಗುವವು. ಶುಭ: 14, 22, 28 ಅಶುಭ: 07, 12, 23.





**ಮಿಥುನ:** ವಾಹನ ಖರೀದಿ ಯೋಗವಿದೆ. ಉದ್ಯೋಗ ವ್ಯವಹಾರದಲ್ಲಿ ಬಡ್ತಿ ಪಡೆಯುವಿರಿ. ಆರೋಗ್ಯದ ಬಗ್ಗೆ ಕಾಳಜಿ ಇರಲಿ. ಅನಗತ್ಯ ಅಲೆದಾಟ ಹೆಚ್ಚಾಗಬಹುದು. ಬಂಧು ಮಿತ್ರರಲ್ಲಿ ಸ್ನೇಹದ ಒಡನಾಟ ಜಾಸ್ತಿ ಇರುತ್ತದೆ. ಮನೆಯಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸುವಿರಿ. ಶುಭ: 10, 15, 27 ಅಶುಭ: 11, 16, 22.

**ಕರ್ಕ:** ಸಮಾಜದಲ್ಲಿ ಉತ್ತಮ ಮಾನ ಸನ್ಮಾನಯೋಗ. ವಿವಿಧ ಮೂಲಗಳಿಂದ ಧನಲಾಭ. ಆರೋಗ್ಯದ ಬಗ್ಗೆ ಕಾಳಜಿ ಇರಲಿ. ಮನೆಗೆ ಬಂಧು ಮಿತ್ರರ ಆಗಮನದಿಂದ ಸಂತಸ. ವಿಲಾಸಿ ವಸ್ತುಗಳನ್ನು ಖರೀದಿ ಮಾಡುವಿರಿ. ವಿವಾಹ ಅಪೇಕ್ಷಿತರಿಗೆ ಉತ್ತಮ ಸಂಬಂಧ ಕೂಡಿಬರುವುದು. ಶುಭ: 11, 14, 25 ಅಶುಭ: 16, 20, 26.





**ಸಿಂಹ:** ಸಾಮಾಜಿಕ, ಆರ್ಥಿಕ ಕ್ಷೇತ್ರದಲ್ಲಿ ಪ್ರಗತಿ. ಕೆಲಸ ಕಾರ್ಯಗಳಲ್ಲಿ ಶ್ರಮ ವಹಿಸುವಿರಿ. ಬಹಳ ವರ್ಷಗಳಿಂದ ಆಗದೇ ಇರುವ ಕಾರ್ಯವೊಂದು ಬಂಧು ಮಿತ್ರರ ಸಹಾಯದಿಂದ ಸಂಪೂರ್ಣಗೊಳ್ಳುವುದು. ಅಲಂಕಾರಿಕ ಗೃಹೋಪಯೋಗಿ ವಸ್ತುಗಳ ಖರೀದಿ ಮಾಡುವಿರಿ. ಶುಭ: 10, 18, 28 ಅಶುಭ: 15, 20, 27.

**ಕನ್ಯಾ:** ನೆರೆ ಹೊರೆಯವರಲ್ಲಿ ಉತ್ತಮ ಸಹಕಾರ, ಸ್ನೇಹಮಯ ವಾತಾವರಣ ಇರುತ್ತದೆ. ಮನೆಯಲ್ಲಿ ಮಂಗಳ ಕಾರ್ಯ ನಡೆಸುವಿರಿ. ಆರ್ಥಿಕವಾಗಿ ಉತ್ತಮ ತಿಂಗಳು. ರಾಜಕೀಯದಲ್ಲಿರುವವರಿಗೆ ಉತ್ತಮ ಫಲಿತಾಂಶ. ಕಬ್ಬಿಣದ ವ್ಯಾಪಾರಿಗಳಿಗೆ ಲಾಭ. ಶುಭ: 14, 18, 26 ಅಶುಭ: 12, 19, 22.





**ತುಲಾ:** ಅವಿವಾಹಿತರಿಗೆ ವಿವಾಹ ಭಾಗ್ಯ. ವಾಹನ ಖರೀದಿ ಯೋಗ. ಉದ್ಯೋಗದಲ್ಲಿ ಮೇಲಧಿಕಾರಿಗಳಿಂದ ಅನವಶ್ಯಕ ಕಿರಿಕಿರಿ. ಕೃಷಿ ಮತ್ತು ಪಶುಪಾಲನೆ ವ್ಯವಹಾರದವರಿಗೆ ನಷ್ಟ. ತಿಂಗಳ ಕೊನೆಯಲ್ಲಿ ಸಣ್ಣ ಪ್ರವಾಸ. ವಿದ್ಯಾರ್ಥಿಗಳಿಗೆ ಸ್ವರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು. ಶುಭ: 14, 18, 22 ಅಶುಭ: 16, 23, 26.

**ವೃಶ್ಚಿಕ:** ಸಹೋದರರಿಂದ, ಹತ್ತಿರದ ಸ್ನೇಹಿತರಿಂದ ಆರ್ಥಿಕ ಸಹಾಯ, ಸಹಕಾರ ಸಿಗುವುದು. ನೂತನ ಮನೆ, ಭೂಮಿ ಖರೀದಿಗೆ ಸಕಾಲ. ಮಕ್ಕಳಿಂದ ಶುಭ ವಾರ್ತೆ. ಶಿಕ್ಷಣ ಹಣಕಾಸು ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಬಡ್ತಿ ಸಾಧ್ಯತೆ. ಆರೋಗ್ಯ ವಿಚಾರದಲ್ಲಿ ಎಚ್ಚರಿಕೆಯಿಂದಿರಿ. ಶುಭ: 14, 19, 26 ಅಶುಭ: 18, 21, 25.





**ಧನು:** ಹೊಸ ಉದ್ಯೋಗವಕಾಶ ಹುಡುಕಿ ಬರುತ್ತದೆ. ಸಾಹಿತ್ಯ, ಸಂಗೀತ ಶಾಸ್ತ್ರಜ್ಞರಿಗೆ ಗೌರವ. ಸರ್ಕಾರಿ ನೌಕರಿಯಲ್ಲಿರುವವರಿಗೆ ಮಾನಸಿಕ ಕಿರಿಕಿರಿ. ವಸ್ತ್ರೋದ್ಯಮ, ಹೋಟೆಲ್ ಉದ್ದಿಮೆದಾರರಿಗೆ ಉತ್ತಮ ಲಾಭ. ಹಿರಿಯರೊಂದಿಗೆ ಬಾಂಧವ್ಯ ವೃದ್ಧಿಸುವುದು. ಶುಭ: 09, 16, 22 ಅಶುಭ: 11, 15, 23.

**ಮಕರ:** ಹಣಕಾಸು ವ್ಯವಹಾರವನ್ನು ಎಚ್ಚರಿಕೆಯಿಂದ ನಡೆಸಿ. ಖರ್ಚು ಹೆಚ್ಚಾಗಬಹುದು, ಅಡೆತಡೆ ಎದುರಾಗಬಹುದು. ಆಪ್ತ ಮಿತ್ರರು ಮನೆಗೆ ಭೇಟಿ ನೀಡುವರು. ಗುಡಿ ಕೈಗಾರಿಕಾ ಉದ್ಯಮದವರಿಗೆ ಅನುಕೂಲ. ಭೂಮಿ, ಚಿನ್ನ ಖರೀದಿಗೆ ಸುಸಮಯ. ಶುಭ: 11, 14, 25 ಅಶುಭ: 13, 26, 27.





**ಕುಂಭ:** ಕೃಷಿ ಕ್ಷೇತ್ರದಲ್ಲಿ ಇರುವವರಿಗೆ ಲಾಭ. ಸಂಧಿವಾತದಿಂದ ಆರೋಗ್ಯ ಸಮಸ್ಯೆ ಕಾಣಿಸಿಕೊಳ್ಳಬಹುದು. ಆಕಸ್ಮಿಕ ಭೂಮಿ ಖರೀದಿ ಯೋಗವಿದೆ. ಹಣಕಾಸು ಸಂಸ್ಥೆಯನ್ನು ಹೊಂದಿರುವವರಿಗೆ ಉತ್ತಮ ಲಾಭ. ವೈಜ್ಞಾನಿಕ ಕ್ಷೇತ್ರದಲ್ಲಿರುವವರಿಗೆ ಬಡ್ತಿ ಯೋಗ ವಿದ್ಯಾರ್ಥಿಗಳಿಗೆ ಶುಭ. ಶುಭ: 14, 19, 22 ಅಶುಭ: 12, 23, 24.

**ಮೀನ:** ಸಮಾಜದಲ್ಲಿ ಗೌರವಾದರಗಳು ಸಿಗಲಿವೆ. ಹಣಕಾಸಿನ ವಿಚಾರದಲ್ಲಿ ಕೆಲವರು ಆಪ್ತಮಿತ್ರರಂತೆ ನಟಿಸಿ ಮೋಸ ಮಾಡಬಹುದು, ಎಚ್ಚರಿಕೆಯಿಂದಿರಿ. ಶೇರು ವ್ಯವಹಾರದಲ್ಲಿ ಉತ್ತಮ ಲಾಭ. ವಾಹನ ಖರೀದಿ ಯೋಗವಿದೆ. ಮನೆಯಲ್ಲಿ ಸಂತಸದ ವಾತಾವರಣ. ಶುಭ: 14, 20, 28 ಅಶುಭ: 18, 23, 24.

